ದಿನಾಂಕಃ **19-02-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಎಂ ಪಿ ವಕೀಲರಿಂದ,**

1) ನನ್ನ ತಾಯಿ ಭಾಗ್ಯಮ್ಮ ರವರಿಗೆ ಸರ್ವೇ ನಂ. 158 ರಲ್ಲಿ 38 ಗುಂಟೆ ಆಸ್ತಿ ದಿಃ 03-05-1976 ರ ನೊಂದಾಯಿತ ಮರಣ ಶಾಸನದ ಮೂಲಕ ಬಂದಿರುತ್ತದೆ ಎಂದರೆ ಸರಿ. ಸದರಿ ಮರಣ ಶಾಸನವನ್ನು ನನ್ನ ಲಿಂಗಪ್ಪ ರವರು ಬರೆದುಕೊಟ್ಟಿರುತ್ತಾರೆ. ಸದರಿ ಮರಣ ಶಾಸನ ಪತ್ರದಲ್ಲಿ ವಾದಿಗೆ ಸರ್ವೇ 145/3 ರಲ್ಲಿ 30 ಗುಂಟೆ ವಿಸ್ತೀರ್ಣ ಬಂದಿರುತ್ತದೆ ಎಂದರೆ ಸರಿ. ದಿಃ 03-05-1976 ರ ಮರಣ ಶಾಸನ ನಕಲು ಪ್ರತಿಯನ್ನು ಸಾಕ್ಷಿಯು ಒಪ್ಪಿಕೊಂಡ ಕಾರಣ ನಿಪಿ-22 ಎಂದು ಗುರುತಿಸಲಾಯಿತು. ನನ್ನ ತಾತ ಲಿಂಗಪ್ಪ ರವರು ದಿಃ 12.10.1990 ರಂದು ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಾತ ಲಿಂಗಪ್ಪ ರವರು ಮರಣ ಹೊಂದಿದ್ದ ನಂತರ ಅವರ ಹೆಣ್ಣು ಮಕ್ಕಳು ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನ ಪತ್ರದಲ್ಲಿ ದಾವಾ ಸ್ವತ್ತುಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಲಿಂಗಪ್ಪ ರವರು ಮರಣ ಶಾಸನ ಮಾಡಿರುವುದಿಲ್ಲ ಎಂದು ನನಗೆ ಗೊತ್ತಿಲ್ಲ.

2) ಲಿಂಗಪ್ಪ ರವರ ಜೀವಿತಾವಧಿಯಲ್ಲಿ ಅಥವಾ ನಂತರ ದಾವಾ ಸ್ವತ್ತುಗಳ ಬಗ್ಗೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೃತ 1 ನೇ ಪ್ರತಿವಾದಿ ರವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ನಾನು ಅವರಿಗೆ ದತ್ತು ಮಗ ಎಂದು ನುಡಿಯುತ್ತಾರೆ. ಸಾಕ್ಷಿಯು ದತ್ತು ಪುತ್ರ ಎಂದು ಯಾವುದೇ ದಾಖಲೆ ಇರುವುದಿಲ್ಲ. ನಾವು ಮಕ್ಕಳು ತರ ಇರುತ್ತೇವೆ ಆದರೆ ದತ್ತು ಮಕ್ಕಳಾಗಿರುವುದಿಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತುಗಳಾದ್ದು, ವಾದಿಗೆ ಭಾಗಾಂಶ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಭಾಗಂಶ ಹಕ್ಕನ್ನು ನೀಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಯಾರನ್ನು ಸಹ ದತ್ತು ತೆಗೆದುಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ